# ಸಿಂಫೋನಿಯಿಂದ ನೂತನ ಏರ್ ಕೂಲರ್

**ಬೆಂಗಳೂರು:** ಸಿಂಫೋನಿ ಕಂಪನಿ ವತಿಯಿಂದ ಮಾರುಕಟ್ಟೆಗೆ ಹೊಸದಾಗಿ ಏರ್ ಕೂಲರ್ ಬಿಡುಗಡೆಯಾಗಿದೆ. ಬೇರೆ ಕಂಪನಿಗಳ ಏರ್ ಕೂಲರ್‌ಗಳಿಗೆ ಹೋಲಿಸಿದರೆ ಇದು ಶೇ.60 ಕಡಿಮೆ ವಿದ್ಯುತ್ ಬಳಸುವ ಸಾಮರ್ಥ್ಯ ಹೊಂದಿದೆ. ಇದರಿಂದ ವಾರ್ಷಿಕ ವಿದ್ಯುತ್ ವೆಚ್ಚದಲ್ಲಿ 2 ಸಾವಿರ ರೂ. ವರೆಗೆ ಉಳಿತಾಯವಾಗಲಿದೆಯಂತೆ.

## » ಮಾರುಕಟ್ಟೆಗೆ ಬಿಡುಗಡೆ

80 ಲೀ, 55 ಲೀ, ಮತ್ತು 30 ಲೀ, ವಾಟರ್ ಟ್ಯಾಂಕ್ ಸಾಮರ್ಥ್ಯದ ಮೂರು ಮಾದರಿ ಏರ್ ಕೂಲರ್‌ಗಳು ಲಭ್ಯವಿದ್ದು, 7 ವಿವಿಧ ಆಯ್ಕೆಗಳಿವೆ. 8 ಗಂಟೆಗಳ ನೈಟ್ ಸ್ಲೀಪ್ ಮೋಡ್, ಟಚ್ ಸ್ಕ್ರೀನ್ ಕಂಟ್ರೋಲ್ ಪ್ಯಾನೆಲ್, ಟ್ಯಾಂಕ್‌ನಲ್ಲಿ ನೀರು ಬರಿದಾದರೆ ಎಚ್ಚರಿಕೆ ಗಂಟೆ ಸೇರಿ ಮುಂತಾದ ವೈಶಿಷ್ಟ್ಯಗಳಿವೆ ಎಂದು ಕಂಪನಿ ಎಂಡಿ ಅಚಲ್ ಬಾಕಿರಿ ಮಾಹಿತಿ ನೀಡಿದ್ದಾರೆ.

1988ರಲ್ಲಿ ಸ್ಥಾಪನೆಯಾದ ಸಿಂಫೋನಿ ಕಂಪನಿ, 60ಕ್ಕೂ ಹೆಚ್ಚು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಭಾರತದಲ್ಲಿ ಪ್ರಸಿದ್ಧ ಬಹುರಾಷ್ಟ್ರೀಯ ಏರ್ ಕೂಲರ್ ಕಂಪನಿ ಇದಾಗಿದೆ.

ಮನೆ, ವಾಣಿಜ್ಯ ಮತ್ತು ಕೈಗಾರಿಕಾ ತಾಣಗಳಿಗೆ ವ್ಯಾಪಕ ಶ್ರೇಣಿಯ ಉತ್ಪನ್ನಗಳಿವೆ. ಅಹಮದಾಬಾದ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಸಿಂಫೋನಿ, ಹವಾಮಾನ ಬದಲಾವಣೆಯನ್ನು ಎದುರಿಸಲು ಹಸಿರು ತಂತ್ರಜ್ಞಾನದ ಏರ್ ಕೂಲರ್ ಉದ್ಯಮ ಪ್ರಯತ್ನಗಳನ್ನು ಮುನ್ನಡೆಸುತ್ತದೆ. 200ಕ್ಕೂ ಅಧಿಕ ಟ್ರೇಡ್‌ಮಾರ್ಕ್‌ಗಳು, 60ಕ್ಕೂ ಹೆಚ್ಚು ನೋಂದಾಯಿತ ವಿನ್ಯಾಸಗಳಿವೆ.